**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

ಸ್ಪೆಷಲ್ ಕೇಸ್ ನಂಃ 56/2023 ಪಿ.ಡಬ್ಲ್ಯೂಃ 1

ಸಿ.ಡಬ್ಲ್ಯೂಃ 1

| | |
|---|---|
| ಸಾಕ್ಷಿದಾರರ ಹೆಸರು | ಜಯ |
| ತಂದೆಯ ಹೆಸರು | ಗೋಪಾಲ |
| ವಯಸ್ಸು | 43 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಿಳಾಸ | ಕೆಮ್ಮಣ್ಣು |

ದಿನಾಂಕಃ 30-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ಚಾಸಾ-6 ನನ್ನ ಅಕ್ಕ. ನಾನು ಕೆಮ್ಮಣ್ಣುವಿನಲ್ಲಿ ಕುಟುಂಬದೊಂದಿಗೆ ವಾಸವಾಗಿದ್ದೇನೆ. ನಾನು ಕೂಲಿ ಕೆಲಸ ಮಾಡಿಕೊಂಡಿದ್ದೇನೆ. ನಾನು ಪರಿಶಿಷ್ಟ ಜಾತಿಗೆ ಸೇರಿದವನಾಗಿದ್ದೇನೆ. ನನಗೆ ಚಾಸಾ-2, 3, 4 ಗೊತ್ತು. ನನಗೆ ಆರೋಪಿತರ ಪರಿಚಯ ಇದೆ. ಆರೋಪಿತರು ಮೇಲ್ಜಾತಿಯವರು. ನನ್ನ ಜಾತಿಯ ಬಗ್ಗೆ ಆರೋಪಿತರಿಗೆ ಗೊತ್ತು.

2) ತಾರೀಕು 16-06-2023 ರಂದು ಸಂಜೆಯ 6.00 ಗಂಟೆಯ ಸಮಯಕ್ಕೆ ತೊಟ್ಟಂ ಬೀಚ್ ಕಡೆಗೆ ವಾಯು ವಿಹಾರಕ್ಕಾಗಿ ಹೋಗಿದ್ದೆ. ಅಲ್ಲಿ ಕಟ್ಟೆಯ ಮೇಲೆ ನಾನು ಕುಳಿತ್ತಿದ್ದೆ. ನಾನು ಅಲ್ಲಿಗೆ ಆಕ್ಟೀವಾ ಸ್ಕೂಟರ್ ನಲ್ಲಿ ಹೋಗಿದ್ದೆ. ಸುಮಾರು 6.15 ಗಂಟೆಗೆ ಆರೋಪಿತರು ಮತ್ತು ಇನ್ನೂ 3 ಜನ ಹುಡುಗರೊಂದಿಗೆ ಅಲ್ಲಿಗೆ ಬಂದಿದ್ದರು. ಅಲ್ಲಿಗೆ ಬಂದು ಸಿಗರೇಟ್ ಕೇಳಿದ್ದರು, ನಾನು ಸೇದುವುದಿಲ್ಲ, ನನ್ನ ಬಳಿ ಸಿಗರೇಟ್ ಇಲ್ಲ ಎಂದು ಹೇಳಿದ್ದೆ. ಆಗ ಅವರು ನನಗೆ '' ಬೇವರ್ಸಿ, ರಂಡೇ ಮಗಾ, ನೀನು ದೊಡ್ಡ ಜನವಾ, ಹಾಗೂ ನೀನು ದಿಕ್ಕ ಜಾತಿಯವನು '' ಎಂದು ಬೈದರು ಹಾಗೂ ಐದು ಜನರು ನನಗೆ ಕೈಗಳಿಂದ ತಲೆಗೆ, ಬೆನ್ನಿಗೆ, ಮುಖಕ್ಕೆ ಹೊಡೆದರು. ಆಗ

ನಾನು ನನ್ನ ವಾಹನವನ್ನು ಅಲ್ಲಿಯೇ ಬಿಟ್ಟು ತಪ್ಪಿಸಿಕೊಂಡು ಓಡಿದ್ದೆ. ಆಗ ಚಾಸಾ-2 ಇವರು ಸೈಕಲ್ ನಲ್ಲಿ ಬರುತ್ತಿದ್ದರು. ನಾನು ಅವರಿಗೆ ನನ್ನನ್ನು ಹೊಡೆಯಲು ಬರುತ್ತಿರುವುದಾಗಿ, ಅದಕ್ಕಾಗಿ ಹೋಗಲು ಸೈಕಲ್ ಬೇಕು ಎಂದು ಚಾಸಾ-2 ಇವರಿಗೆ ಕೇಳಿದ್ದೆ. ಆ ಸೈಕಲ್ ತೆಗೆದುಕೊಂಡು ನಾನು ಸನ್ಯಾಸಿ ಮಠ ಎಂಬಲ್ಲಿರುವ ಚಾಸಾ-3 ಇವರ ದಿನಸಿ ಅಂಗಡಿಯ ಹಿಂಭಾಗದಲ್ಲಿ ಅಡಗಿ ಕುಳಿತ್ತಿದ್ದೆ. ಆರೋಪಿತರು ಅಲ್ಲಿಗೂ ಬಂದಿದ್ದರು. ಅವರು ನನ್ನ ಮತ್ತು ಅವರ ವಾಹನದಲ್ಲಿ ಅಲ್ಲಿಗೆ ಬಂದಿದ್ದರು. ನಾನು ಅವರಿಗೆ ಹೆದರಿ, ಹಿಂಭಾಗದಿಂದ ಅಂಗಡಿಯ ಒಳಗೆ ಹೋಗಿದ್ದೆ. ಆ ಸಮಯದಲ್ಲಿ ಅಲ್ಲಿ ಚಾಸಾ-3 ಮತ್ತು 4 ಇದ್ದರು.

2) ಆರೋಪಿತರು ಅಂಗಡಿಯ ಎದುರಿನಲ್ಲಿ ಬಂದು ನನ್ನನ್ನು ಅಂಗಡಿಯಿಂದ ಹೊರಗೆ ಬರುವಂತೆ ಕರೆದಿದ್ದರು. ಅಂಗಡಿಯ ಒಳಗೆ 1 ನೇ ಆರೋಪಿ ಮತ್ತು ಶಶಾಂಕ್ ಕೊಳ ಎಂಬ ಬಾಲಕ ಅಂಗಡಿಯ ಒಳಗೆ ಬಂದು, ನನ್ನ ಶರ್ಟ್ ನ್ನು ಹಿಡಿದುಕೊಂಡು ನನ್ನನ್ನು ಅಂಗಡಿಯ ಹೊರಗೆ ಎಳೆದು ತಂದಿದ್ದರು. ಅಲ್ಲಿ ಐದು ಜನ ಆರೋಪಿತರು ನನಗೆ ಕೈಗಳಿಂದ ಹಲ್ಲೆ ಮಾಡಿದ್ದರು. ಆಗ ಸಮಯ 7.15 ಗಂಟೆ. ನಂತರ ನನ್ನ ವಾಹನದಲ್ಲಿ 1 ನೇ ಆರೋಪಿ ಮತ್ತು ಶಶಾಂಕ್ ಬಾಪುತೋಟ ಎಂಬ ಬಾಲಕ ನನ್ನ ವಾಹನದಲ್ಲಿ ನನ್ನನ್ನು ಮಧ್ಯದಲ್ಲಿ ಕೂರಿಸಿಕೊಂಡು, 1 ನೇ ಆರೋಪಿ ಬೈಕ್ ನ ಹಿಂದುಗಡೆ ಕುಳಿತುಕೊಂಡು, ಶಶಾಂಕ್ ಬಾಪುತೋಟ ಸ್ಕೂಟರ್ ನ್ನು ಚಲಾಯಿಸಿಕೊಂಡು, ನನ್ನನ್ನು ಅಪಹರಿಸಿಕೊಂಡು ಹಂಪನಕಟ್ಟೆಯ ಬ್ಯಾಂಕ್ ಆಫ್ ಬರೋಡದ ಕಟ್ಟಡದ ಬಳಿ ಕರೆದುಕೊಂಡು ಹೋಗಿದ್ದರು. ಅಲ್ಲಿ ನನ್ನ ಸ್ಕೂಟರ್ ನ್ನು ನಿಲ್ಲಿಸಿ, ನನ್ನನ್ನು ಇಳಿಸಿ, ದೂಡಿ ಹಾಕಿ, ನನ್ನ ಮೇಲೆ ಇಬ್ಬರು ಆರೋಪಿತರು ಕೈಗಳಿಂದ ಹಲ್ಲೆ ಮಾಡಿ, ಕಾಲಿನಿಂದ ತುಳಿದಿದ್ದರು.

3) ಅಲ್ಲಿಂದ ನಾನು ತಪ್ಪಿಸಿಕೊಂಡು, ಹಂಪನಕಟ್ಟೆಯ ಬಳಿ ಇರುವ ಒಂದು ದಿನಸಿ ಅಂಗಡಿಗೆ ಹೋಗಿ ಅಡಗಿ ಕುಳಿತ್ತಿದ್ದೆ. ಅಲ್ಲಿ ಜನ ಸೇರಿದ್ದರು. ಆಗ ಆರೋಪಿತರು ನನ್ನ ಸ್ಕೂಟರ್ ನ್ನು ಅಲ್ಲಿಯೇ ಬಿಟ್ಟು ಓಡಿದ್ದರು. ನಂತರ ನಾನು ಚಾಸಾ-6 ಇವರಿಗೆ ವಿಷಯ ತಿಳಿಸಿದ್ದೆ. ಅವರು ನನ್ನ ಭಾವನೊಂದಿಗೆ ಬಂದಿದ್ದರು. ಅವರು ನನ್ನನ್ನು ಅಜ್ಜರಕಾಡುವಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಅದೇ ದಿನ ರಾತ್ರಿ

ಪೊಲೀಸರು ಆಸ್ಪತ್ರೆಗೆ ಬಂದಿದ್ದರು. ಅಲ್ಲಿ ನಾನು ದೂರು ಕೊಟ್ಟಿದ್ದೆ. ಅದನ್ನು ನನ್ನ ಅಕ್ಕನ ಮಗಳು ಉಷಾ ಎನ್ನುವವಳು ಬರೆದಿದ್ದಳು. ಅದನ್ನು ಬರೆಯಲು ನಾನೇ ಹೇಳಿದ್ದೆ. ನಂತರ ಆ ದೂರಿಗೆ ನಾನು ಸಹ ಸಹಿ ಮಾಡಿದ್ದೆ. ಆದಿನ ನಾನು ಹೇಳಿ, ಬರೆಯಿಸಿದ ದೂರನ್ನು ಈಗ ನೋಡಿ ಅದನ್ನು **ನಿಶಾನೆ ಪಿ-1** ಎಂದು, ಅದರಲ್ಲಿರುವ ನನ್ನ ಸಹಿಯನ್ನು **ನಿಶಾನೆ ಪಿ-1(ಎ)** ಎಂದು, ಅದನ್ನು ಬರೆದ ಉಷಾಳ ಸಹಿಯನ್ನು **ನಿಶಾನೆ ಪಿ-1(ಬಿ)** ಎಂದು ಗುರುತಿಸಿದ್ದೇನೆ. ಮರುದಿನ ನಾನು ಆಸ್ಪತ್ರೆಯಿಂದ ಹೊರಬಂದಿದ್ದೆ.

4) ತಾರೀಕು 17-06-2023 ರಂದು ಪೊಲೀಸರು ಬಂದು ಪಂಚನಾಮೆ ಮಾಡಿದ್ದರು. ಮೊದಲು ನಾನು ತೊಟ್ಟಂ ಬೀಚ್ ನಲ್ಲಿ ಕುಳಿತ್ತಿದ್ದ ಕಟ್ಟೆಗೆ ಬಂದು ಪಂಚನಾಮೆ ಮಾಡಿದ್ದರು. ಆಗ ಜಾಗೆಯನ್ನು ನಾನೇ ತೋರಿಸಿದ್ದೆ. ಆಗ ಅಲ್ಲಿ ಚಾಸಾ-17 ಮತ್ತು 18 ಸಹ ಇದ್ದರು. ಅಲ್ಲಿ ತಯಾರಿಸಿದ ಮಹಜರನ್ನು ಈಗ ನೋಡಿ ಅದನ್ನು **ನಿಶಾನೆ ಪಿ-2** ಎಂದು, ಅದರಲ್ಲಿರುವ ನನ್ನ ಸಹಿಯನ್ನು **ನಿಶಾನೆ ಪಿ-2(ಎ)** ಎಂದು ಗುರುತಿಸಿದ್ದೇನೆ. ಆಗ ಸಮಯ 1.00 ರಿಂದ 1.45 ರ ಸಮಯವಾಗಿತ್ತು. ಆಗ ತೆಗೆದಿದ್ದ 4 ಪೋಟೋಗಳನ್ನು ಒಟ್ಟಾಗಿ **ನಿಶಾನೆ ಪಿ-3** ಎಂದು ಗುರುತಿಸಿದೆ.

5) ನಂತರ ಸನ್ಯಾಸಿ ಮಠದ ಬಳಿ ಇರುವ ಚಾಸಾ-3 ಇವರ ಅಂಗಡಿಯ ಬಳಿಯಲ್ಲಿ ಹೋಗಿದ್ದು, ಅಲ್ಲಿಯೂ ಸಹ ನಡೆದ ಘಟನೆಯ ಬಗ್ಗೆ ಹೇಳಿ ನಾನೇ ಪೊಲೀಸರಿಗೆ ಜಾಗೆ ತೋರಿಸಿದ್ದೆ. ಆಗಲೂ ಚಾಸಾ-17 ಮತ್ತು 18 ಸಹ ಅಲ್ಲಿ ಇದ್ದರು. ಅಲ್ಲಿ ತಯಾರಿಸಿದ ಮಹಜರನ್ನು ಈಗ ನೋಡಿ ಅದನ್ನು **ನಿಶಾನೆ ಪಿ-4** ಎಂದು, ಅದರಲ್ಲಿರುವ ನನ್ನ ಸಹಿಯನ್ನು **ನಿಶಾನೆ ಪಿ-4(ಎ)** ಎಂದು ಗುರುತಿಸಿದ್ದೇನೆ. ಆಗ ಸಮಯ 2.30 ರಿಂದ 3.15 ಆಗಿತ್ತು. ಆಗ ತೆಗೆದಿದ್ದ 2 ಪೋಟೋಗಳನ್ನು ಈಗ ನೋಡಿ ಅದನ್ನು ಒಟ್ಟಾಗಿ **ನಿಶಾನೆ ಪಿ-5** ಎಂದು ಗುರುತಿಸಿದೆ.

6) ನಂತರ ಅಲ್ಲಿಂದ ಹಂಪನಕಟ್ಟೆಯ ಬ್ಯಾಂಕ್ ಆಫ್ ಬರೋಡಾದ ಬಳಿ ಹೋಗಿದ್ದೆವು. ಅಲ್ಲಿಯೂ ಸಹ ನಡೆದ ಘಟನೆಯ ಬಗ್ಗೆ ಹೇಳಿ ನಾನೇ ಪೊಲೀಸರಿಗೆ ಜಾಗೆ ತೋರಿಸಿದ್ದೆ. ಆಗಲೂ ಚಾಸಾ-17 ಮತ್ತು 18 ಸಹ ಅಲ್ಲಿ ಇದ್ದರು. ಅವರು ಸಹ ಸಹಿ ಮಾಡಿದ್ದರು. ಅಲ್ಲಿ ತಯಾರಿಸಿದ ಮಹಜರನ್ನು ಈಗ ನೋಡಿ ಅದನ್ನು **ನಿಶಾನೆ ಪಿ-6** ಎಂದು, ಅದರಲ್ಲಿರುವ ನನ್ನ ಸಹಿಯನ್ನು **ನಿಶಾನೆ ಪಿ-6(ಎ)** ಎಂದು ಗುರುತಿಸಿದ್ದೇನೆ.

ಆಗ ಸಮಯ 3.30 ರಿಂದ 4.15 ಗಂಟೆ ಆಗಿತ್ತು. 2.30 ರಿಂದ 3.15 ಆಗಿತ್ತು. ಆಗ ತೆಗೆದಿದ್ದ 2 ಫೋಟೋಗಳನ್ನು ಈಗ ನೋಡಿ ಅದನ್ನು ಒಟ್ಟಾಗಿ **ನಿಶಾನೆ ಪಿ-7** ಎಂದು ಗುರುತಿಸಿದೆ. ಅದೇ ದಿನ ನನ್ನನ್ನು ಮಲ್ಪೆ ಠಾಣೆಗೆ ಕರೆಯಿಸಿ ಅಲ್ಲಿ ದಸ್ತಗಿರಿಯಾಗಿದ್ದ 1 ನೇ ಆರೋಪಿಯನ್ನು ನನಗೆ ತೋರಿಸಿದ್ದರು.

7) ತಾರೀಕು 21-07-2023 ರಂದು ನನ್ನನ್ನು ಉಡುಪಿಯ ಡಿ.ವೈ.ಎಸ್ಪಿ ಕಚೇರಿಗೆ ಕರೆಯಿಸಿದ್ದರು. ಅಲ್ಲಿ ಚಾಸಾ-3, ಸಿಸಿ ಟಿವಿ ಕ್ಯಾಮರಾದ ದ್ರಶ್ಯಾವಳಿಗಳನ್ನು ಸಿಡಿಯಲ್ಲಿ ತಂದು ಹಾಜರುಪಡಿಸಿದ್ದರು. ಆ ಸಿಡಿಯನ್ನು ಅಲ್ಲಿಯೇ ನಮಗೆ ಪ್ಲೇ ಮಾಡಿ ತೋರಿಸಿದ್ದರು. ಆ ದ್ರಶ್ಯಾವಳಿಗಳನ್ನು ನಾನು ನೋಡಿ ಗುರುತಿಸಿದ್ದೆ. ಅದರಲ್ಲಿ ಆರೋಪಿತರು ನನಗೆ ಚಾಸಾ-3 ಇವರ ಅಂಗಡಿಯಲ್ಲಿ ಮತ್ತು ಅಂಗಡಿಯ ಎದುರಿನಲ್ಲಿ ಹಲ್ಲೆ ಮಾಡುವ ದ್ರಶ್ಯ ಇತ್ತು. ನಂತರ ಪೊಲೀಸರು ಸಿಡಿಯನ್ನು ಜಪ್ತು ಮಾಡಿದ್ದರು. ಆಗ ಚಾಸಾ-9 ಮತ್ತು 10 ಇದ್ದರು. ಆಗ ಬರೆದ ಪಂಚನಾಮೆಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-8** ಎಂದು, ಅದರಲ್ಲಿರುವ ನನ್ನ ಸಹಿಯನ್ನು **ನಿಶಾನೆ ಪಿ-8(ಎ)** ಎಂದು ಗುರುತಿಸಿದ್ದೇನೆ. ಆಗ ಚಾಸಾ-9 ಮತ್ತು 10 ಸಹ ಸಹಿ ಮಾಡಿದ್ದರು.

8) ಅದೇ ದಿನ ನನ್ನ ಆಕ್ಟೀವಾ ಸ್ಕೂಟರ ನಂಬ್ರ ಕೆಎ-20-ಇಎನ್ -4957 ನೇ ನಂಬ್ರದ ಸ್ಕೂಟರ್ ನ್ನು ಉಡುಪಿಯ ಡಿ.ವೈ.ಎಸ್ಪಿ ಕಚೇರಿಯಲ್ಲಿ ಹಾಜರುಪಡಿಸಿದ್ದೆ. ಆ ವಾಹನವನ್ನು ತನಿಖಾಧಿಕಾರಿ ಪರಿಶೀಲಿಸಿ, ನನ್ನ ವಶಕ್ಕೆ ಮರಳಿಸಿದ್ದರು. ಆಗ ಬರೆದ ಪಂಚನಾಮೆಯನ್ನು ಈಗ ನೋಡಿ **ನಿಶಾನೆ ಪಿ-9** ಎಂದು, ಅದರಲ್ಲಿ ಇರುವ ನನ್ನ ಸಹಿಯನ್ನು **ನಿಶಾನೆ ಪಿ-9(ಎ)** ಎಂದು ಗುರುತಿಸಿದ್ದೇನೆ. ಆ ಸಮಯದಲ್ಲಿ ತೆಗೆದಿದ್ದ ಫೋಟೋವನ್ನು ಈಗ ನೋಡಿ **ನಿಶಾನೆ ಪಿ-10** ಎಂದು ಗುರುತಿಸಿದ್ದೇನೆ. ಆ ಫೋಟೋದಲ್ಲಿರೂ ಸ್ಕೂಟರ್ ನನ್ನದೇ ಇದೆ. ನಿಪಿ-10 ರ ಫೋಟೋದಲ್ಲಿ ನಾನು, ಸಾಕ್ಷಿದಾರರು ಮತ್ತು ತನಿಖಾಧಿಕಾರಿ ಇದ್ದೇವೆ.

9) ಆದಿನ ಆರೋಪಿತರು ನನ್ನ ಹಲ್ಲೆಯ ಸಮಯದಲ್ಲಿ ಬಳಸಿದ್ದ ಸ್ಕೂಟರ್ ನ್ನು ನೋಡಿ ಗುರುತಿಸಿದ್ದೇನೆ. ಸದರಿ ಎರಡು ಫೋಟೋಗಳನ್ನು ಈಗ ನೋಡಿ ಅದನ್ನು **ನಿಶಾನೆ ಪಿ-11** ಎಂದು ಗುರುತಿಸಿದೆ. ಆದಿನ ನನಗೆ ಹಲ್ಲೆ ಮಾಡಿ, ಬೈದಿದ್ದವರು ಈದಿನ ನ್ಯಾಯಾಲಯದಲ್ಲಿ ಇರುವ ಆರೋಪಿತರು ಅಲ್ಲದೇ, ಶಶಾಂಕ್ ಕೊಳ, ಶಶಾಂಕ್

ಬಾಪುತೋಟ, ಧ್ರುವ ಎನ್ನುವವರು ಆಗಿದ್ದಾರೆ. ನಿಶಾನೆ ಪಿ- 8 ರ ಅಡಿಯಲ್ಲಿ ಜಪ್ತಾದ ಸಿಡಿಯನ್ನು ನೋಡಿ ಗುರುತಿಸಬಲ್ಲೆ. ಅದನ್ನು ಎಂಒ-1 ಎಂದು ಗುರುತಿಸಿದೆ. ದೂರು ಕೊಟ್ಟ ನಂತರ ಪೊಲೀಸರು ನನ್ನನ್ನು ಎರಡು ಬಾರಿ ವಿಚಾರಿಸಿದ್ದರು. ತನಿಖಾಧಿಕಾರಿಗಳು ನಂತರ ನನಗೆ 2 ನೇ ಆರೋಪಿತನೊಂದಿಗೆ ಆದಿನ ಇದ್ದ ಮೂರು ಜನ ಬಾಲಕರನ್ನು ಸಹ ತೋರಿಸಿದ್ದರು. ನಾನು ಅವರನ್ನು ನನ್ನ ಮೇಲೆ ಆದ ಹಲ್ಲೆಗಾಗಿ ನೋಡಿ ಗುರುತಿಸಿದ್ದೆ.

10) ಈ ಹಂತದಲ್ಲಿ ಎಂಒ-1 ನ್ನು ಐ.ಓ. ಸೀಲು ಇರುವ ಕವರ್ ನಿಂದ ತೆಗೆದು, ತೋರಿಸಿದ ಸಿಡಿಯನ್ನು ನೋಡಿದಾಗ, ಅದರಲ್ಲಿ ದ್ರಶ್ಯಾವಳಿಗಳು 3 ನಿಮಿಷ 40 ಸೆಕೆಂಡ್ ಗಳಿರುವ ದ್ರಶ್ಯಾವಳಿಗಳನ್ನು ನೋಡಿದಾಗ, ಅದು ಚಾಸಾ-3 ಇವರ ಅಂಗಡಿಯ ಒಳಗಿನ ಭಾಗ. ಅದರಲ್ಲಿ 1 ನೇ ಆರೋಪಿ ಮತ್ತು ಶಶಾಂಕ್ ಕೊಳ ಎಂಬವರು ನನಗೆ ಹಲ್ಲೆ ಮಾಡುತ್ತಿರುವುದನ್ನು ನೋಡಿ ಗುರುತಿಸಿದ್ದೇನೆ. ಆ ದ್ರಶ್ಯಾವಳಿಯಲ್ಲಿ ಚಾಸಾ-3 ಮತ್ತು 4 ನನಗೆ ಆಗುತ್ತಿದ್ದ ಹಲ್ಲೆಯನ್ನು ತಪ್ಪಿಸುತ್ತಿದ್ದರು. ದ್ರಶ್ಯಾವಳಿಯಲ್ಲಿ ಇದ್ದ ವ್ಯಕ್ತಿಗಳು ಆ ಘಟನೆಯ ಸಾಕ್ಷಿದಾರರು.

11) ಈ ದಿನ ನ್ಯಾಯಾಲಯದಲ್ಲಿ 1 ಮತ್ತು 2 ನೇ ಆರೋಪಿತರನ್ನು ಆದಿನ ನನ್ನ ಮೇಲೆ ಆಗಿದ್ದ ಹಲ್ಲೆಗಾಗಿ ಗುರುತಿಸಿದ್ದೇನೆ.

**(ಆರೋಪಿತರು ಹೊಸ ವಕೀಲರನ್ನು ನೇಮಿಸಿಕೊಳ್ಳಲು ಮತ್ತು ಪಾಟೀಸವಾಲು ಮಾಡಲು ವೇಳೆ ಕೋರಿದ್ದರಿಂದ ಮುಂದೂಡಲಾಗಿದೆ)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.